
ಮಸುಕಾಗಿ ಕಾಣಿಸಿಕೊಳ್ಳುತ್ತಿವೆ. ಇದು ನಕಾರಾತ್ಮಕ ಅಲ್ಲ, ಬದಲಿಗೆ ಸದ್ಯದ ಬದುಕಿನ ಪಲ್ಲಟಗಳಿಗೆ ತಕ್ಕಂತೆ ಅವರ ಕಥನದ ಹೆಜ್ಜೆಗಳು ಬದಲಾಗುತ್ತಿರುವುದರ ಸೂಚಕ. ಹೊಸಬರ ಕಥಾಲೋಕದಲ್ಲಿ ಮುಖ್ಯವಾಗಿ ಗ್ರಹಿಸಬಹುದಾದ ಅಂಶವೆಂದರೆ, 'ಏಕಮುಖಿ ಸಂವೇದನೆ'ಗಳಿಂದ ತಪ್ಪಿಸಿಕೊಂಡಿರುವುದು. ಇವುಗಳನ್ನು ಕಥನದ ಚೌಕಟ್ಟಿಗೆ ತರುವಲ್ಲಿ ದಿಕ್ಕುತಪ್ಪಬಹುದು, ಆದರೆ ಇವರೆಲ್ಲಾ ಕೇವಲ ಒಂದೆರಡು ಸಂಕಲನಗಳನ್ನು ತಂದಿರುವುದರಿಂದ ಈ ಹಿನ್ನೆಲೆಯಲ್ಲಿ ಅಂತಿಮ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಅಸಾಧ್ಯ. ನಾವೇನಿದ್ದರೂ ಇದುವರೆಗಿನ ಕಥೆಗಳ ಮಟ್ಟಿಗೆ ನಮ್ಮ ವಿಶ್ಲೇಷಣಾ ಕ್ರಮಗಳನ್ನು ಮಂಡಿಸಬಹುದು. ಇವರ ಅನುಭವಲೋಕ ಏನಿದ್ದರೂ ಕಳೆದ ಇಪ್ಪತ್ತೈದು ವರ್ಷಗಳ ಗರ್ಭದಲ್ಲಿದೆಯಷ್ಟೆ. ಕೆಲವರು ಬಾಲ್ಯದ ವಸ್ತುವಿನ ಮೂಲಕ ಬದುಕನ್ನು ಕಂಡರೆ, ಕೆಲವರು ಸದ್ಯದ ಅನುಭವಗಳನ್ನು ಕಥೆಯಾಗಿಸುತ್ತಾರೆ. ಮತ್ತೂ ಕೆಲವರು ಏಕತಾನತೆಯಿಂದ ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಈ ನಡುವೆ ಕಥನದ ಸೃಜನಶೀಲತೆಗೂ, ಬದುಕಿನ ಪಲ್ಲಟಗಳಿಗೂ ಇವರು ಜೋಡಿಸುವ ದೊಡ್ಡ ಮಟ್ಟದ 'ಕಾಣ್ಕೆ'ಯ ಕೊಂಡಿ ಚದುರಿದಂತೆ ಕಾಣುತ್ತದೆ. ಬರಹಗಾರನಿಗೆ ಸೃಜನಶೀಲತೆಯ ನಾಶವೆಂಬುದು ಇಚ್ಛಾಮರಣದ ಹಾಗೆ. ಬದುಕನ್ನು ಅರ್ಥಮಾಡಿಕೊಂಡಷ್ಟು ಅಥವಾ ಅದನ್ನು ಅಗೆದಷ್ಟೂ ಸೃಜನಶೀಲತೆ ನಾಶ ಆಗೋದಿಲ್ಲ. ಯಾವಾಗ ನಾವು ಬದುಕಿನ ಲಯಗಳನ್ನು ಉದ್ದೇಶಪೂರ್ವಕವಾಗಿ ಅಂತ್ಯಗೊಳಿಸುತ್ತೇವೋ ಅಂದೇ ನಮ್ಮ ಸೃಜನಶೀಲತೆ ನಾಶವಾಗಬಹುದು.




ಪ್ರಾಮಾಣಿಕತೆಯು ಸೃಜನಶೀಲತೆಯ ಪೋಷಕ ಶಕ್ತಿ. ಪಾತ್ರಗಳ ಬೆಳವಣಿಗೆಯಲ್ಲಿ ಇದನ್ನು ಸೂಕ್ಷ್ಮವಾಗಿ ಕಾಣಬಹುದು. ಹೊಸಬರಿಗಿರುವ ಸವಾಲೆಂದರೆ, ಹಿಂದೆ ಹೇಳಿರುವ ತಮ್ಮ ಹಿಂದಿನ ಎರಡೂ ಮಾರ್ಗಗಳು ನಿರ್ಮಾಣ ಮಾಡಿರುವ ವಸ್ತುವನ್ನು ದಾಟುವುದರಲ್ಲಿ. ಅದರಲ್ಲೂ ಗ್ರಾಮ ಮತ್ತು ನಗರಚಿತ್ರಗಳನ್ನು ಅನಾವರಣ ಮಾಡುವಾಗ ಸಿದ್ಧಪಾತ್ರಗಳ ಹಾಗೂ ಜೀವನಕ್ರಮದ ಏಕತಾನತೆಯನ್ನು ಮೀರುವ ಜಾಗದಲ್ಲಿ. ಪ್ರಾದೇಶಿಕ ವಿಚಾರಕ್ಕೆ ಬಂದರೂ ಕನ್ನಡ ವಿಮರ್ಶೆ ಈ ಕುರಿತು ಸಾಕಷ್ಟು ಚರ್ಚೆ ಮಾಡಿದೆ. ಇದಕ್ಕೊಂದು ಚರಿತ್ರೆಯೇ ಇದೆ. ಆದರೆ, ಜೀವನಶೈಲಿ ಪಲ್ಲಟಗೊಂಡಂತೆ ಪ್ರಾದೇಶಿಕತೆಯ ಬಗೆಗಳು ಬದಲಾಗಿವೆ. ಹೊಸಬರ ಬಹುತೇಕ ಕಥೆಗಳು ಕೇವಲ ಗ್ರಾಮದಲ್ಲೇ ಬೇರುಬಿಟ್ಟಿಲ್ಲ. ಹಲವು ಪಾತ್ರಗಳು ಬದುಕಿನ ದಾರಿ ಹಿಡಿದು ಗ್ರಾಮ-ನಗರವೆಂಬ ಗೆರೆಗಳನ್ನು ಮೀರಿ ಸುಳಿದಾಡುತ್ತವೆ. ಹಾಗಾಗಿ ನಗರದ ಚಿತ್ರಗಳಲ್ಲೂ ಒಂದು ಪ್ರಾದೇಶಿಕತೆ ಜಾಗ ಪಡೆದುಕೊಂಡಿದೆ. ಪ್ರಾದೇಶಿಕತೆ ಎಂಬುದು ಕೇವಲ ಭಾಷೆಯ ಅಭಿವ್ಯಕ್ತಿಯಾಗಿ ಉಳಿದಿರುವುದಿಲ್ಲ; ನೆಲಕ್ಕೆ ಅಂಟಿಕೊಂಡ ಬದುಕಿನ ಸ್ಥಿತಿಗತಿಗಳು, ಪಲ್ಲಟಗಳ ಕಾರ್ಯಕಾರಣ ಸಂಬಂಧಗಳನ್ನು ಅನಾವರಣಗೊಳಿಸುವುದು ಎಂದರ್ಥ. ಹೊಸ ತಲೆಮಾರಿನ ಬಹುತೇಕ ಕಥೆಗಳು ಇದರಿಂದ ಮುಖ ತಿರುಗಿಸಬಲ್ಲವು; ಮತ್ತೂ ಕೆಲವರು ಪ್ರಯೋಗಶೀಲತೆಯ ಹಂತದಲ್ಲಿದ್ದಾರೆ.

ನಿರೂಪಣೆಯ ಸ್ಪಷ್ಟತೆ, ವಿವರಗಳನ್ನು ವಸ್ತುವಿಗೆ ತಕ್ಕಂತೆ ಜೋಡಿಸುವುದು, ಇವೆಲ್ಲವೂ ಹಲವು ಬಾರಿ ಆಶಯದ ಗಟ್ಟಿತನಕ್ಕೆ ಸರಾಗತೆಯನ್ನು ನೀಡಬಲ್ಲವು. ಬಹುಶಃ ಕಥನಗಾರಿಕೆಯ ಕುಶಲತೆಗೂ ಇವು ಪ್ರಧಾನ. ಪದ್ಮನಾಭ ಭಟ್ಟ ಸೇರಿದಂತೆ ಕೆಲವರನ್ನು ಈ ನಿಟ್ಟಿನಲ್ಲಿ ಚರ್ಚಿಸಬಹುದು. ಯಾವುದೇ ಸಿದ್ಧಾಂತಗಳ ಭಾರವಿಲ್ಲದೇ, ಕೇವಲ ಬದುಕಿನ ತೊಯ್ದಾಟಗಳನ್ನು ಪದ್ಮನಾಭರ ಕೆಲ ಕಥೆಗಳು ಅಭಿವ್ಯಕ್ತಿಸುತ್ತವೆ. ಮನುಷ್ಯ ಸಂಬಂಧಗಳಲ್ಲಿ ಕೃತಕತೆಯನ್ನು ತಾರದೇ 'ಕೆಲ' ಕಥೆಗಳು ತಮ್ಮಷ್ಟಕ್ಕೆ ತಾವೇ 'ಕಥೆಗಳಾಗಿವೆ'. ಬಾಲ್ಯದ ಗಟ್ಟಿ ಅನುಭವಗಳು ತೀರಾ ಸಂಕೀರ್ಣ ರೂಪ ಪಡೆಯದೇ ಮನುಷ್ಯನ ಅಂತರಂಗದ ಮೂಲಕವೇ ಮೌಲ್ಯಗಳನ್ನು ತರುವುದು; ತಾರುಣ್ಯವು ನಗರದ ಬದುಕಿನೊಂದಿಗೆ ಹೊಂದಿಕೊಳ್ಳಲಾರದ ಸ್ಥಿತಿಗಳು – ಈ ಬಗೆಯ ಆಶಯಗಳು ಇವರ ಕಥೆಗಳನ್ನು ಒಳಗೊಂಡಿವೆ. ಕೇವಲ ಸಂಗತಿಗಳ ಮೂಲಕ ಹೊರಡುವ 'ಕೇಪಿನ ಡಬ್ಬಿ', 'ಮಧ್ಯವಿಲ್ಲದ ಧರಣಿ ಮಂಡಲ', 'ಎಡಿಟ್ ಡಿಲಿಟ್' ಇತ್ಯಾದಿ ಕಥೆಗಳಿಗೆ ಹೋಲಿಸಿದರೆ, 'ಚೇಳು ಕಚ್ಚಿದ ಗಾಯ'. 'ಪೊಕ್ಕ ಹರಿಶ್ಚಂದ್ರ', 'ಇಲ್ಲದ ತೀರದ ಕಡೆಗೆ', 'ಆಯಿಮನೆ' ಮುಂತಾದ